For More Job News Visit : www.kscvaani.com

ಕರ್ನಾಟಕ ಸರ್ಕಾರ
(ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ)
ಸಾರ್ವಜನಿಕ ಗ್ರಂಥಾಲಯ ಇಲಾಖೆ

Email Id:dcl.bgm11@gmail.com
ದೂರವಾಣಿ:(0831)2424231

ಉಪ ನಿರ್ದೇಶಕರವರ ಕಚೇರಿ,
ಜಿಲ್ಲಾ ಕೇಂದ್ರ ಗ್ರಂಥಾಲಯ,
ಜಿಲ್ಲಾಧಿಕಾರಿಯವರ ಕಚೇರಿ ಆವರಣ,
ಬೆಳಗಾವಿ – 590002

ಸಂ:ಜಿಕೇಗ್ರಂಬೆ/ಗ್ರಾ.ಪಂಗ್ರಂ/ಮೇಆ/ /2021–22 ದಿನಾಂಕ :14/01/2022

–: ಅಧಿಸೂಚನೆ :–

ವಿಷಯ : ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗೆ ಅರ್ಜಿಗಳನ್ನು ಆವ್ಹಾನಿಸುವ ಕುರಿತು.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಕೇಂದ್ರ ಗ್ರಂಥಾಲಯ, ಬೆಳಗಾವಿಯ ಕಾರಣಾಂತರಗಳಂದ ಖಾಲಿಯಾದ ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಗ್ರಂಥಾಲಯ ಮೇಲ್ವಿಚಾರಕರ ಆಯ್ಕೆ ಆಗಬೇಕಾಗಿರುತ್ತದೆ. ಗ್ರಂಥಾಲಯ ಮೇಲ್ವಿಚಾರಕರನ್ನು ಗೌರವ ಸಂಭಾವನೆಯ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು. ಇದಕ್ಕಾಗಿ ಈ ಕೆಳಕಂಡ ಶರತ್ತುಗಳಿಗೆ ಒಳಪಟ್ಟು, ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ನಿಗದಿಪಡಿಸಿದ ಮೀಸಲಾತಿಗೆ ಅನುಗುಣವಾಗಿ ಅರ್ಜಿಗಳನ್ನು ಆವ್ಹಾನಿಸಲಾಗಿದೆ.

–: ಷರತ್ತುಗಳು :–

1. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಂಕ ಹಾಗೂ ಶೇಕಡಾವಾರು ಅಂಕಗಳನ್ನು ಕಡ್ಡಾಯವಾಗಿ ನಮೂದಿಸಬೇಕು.
2. ಅಭ್ಯರ್ಥಿಯು ಸ್ಥಳೀಯ ಗ್ರಾಮ ಪಂಚಾಯತ ವ್ಯಾಪ್ತಿಗೆ ಸೇರಿರಬೇಕು. ಕಡ್ಡಾಯವಾಗಿ ತಹಶೀಲ್ದಾರರವರಿಂದ ಪಡೆದ ರಹವಾಸಿ ಪ್ರಮಾಣ ಪತ್ರ ಲಗತ್ತಿಸಿರಬೇಕು.
3. ನಿಗದಿಪಡಿಸಿದ ಮೀಸಲಾತಿಗೆ ಒಳಪಡುವ ಅಭ್ಯರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಮುಂದುವರಿಕೆ ಶಿಕ್ಷಣದ ಅಡಿಯಲ್ಲಿ ಪ್ರೇರಕ/ಉಪ ಪ್ರೇರಕರು ಮತ್ತು ಸಂಯೋಜಕರೆಂದು ಸೇವೆ ಸಲ್ಲಿಸಿದ್ದಲ್ಲಿ ಅಂತಹವರಿಗೆ ಪ್ರಾಧಾನ್ಯತೆ ನೀಡಲಾಗುವುದು (ಜಿಲ್ಲಾ &ತಾಲೂಕಾ ಸಂಯೋಜಕರಿಂದ ಪಡೆದ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು)
4. ಅಭ್ಯರ್ಥಿಗಳು **"https://zpbelagavi.kar.nic.in" ಜಿಲ್ಲಾ ಪಂಚಾಯತ್** ಅಂತರ್ಜಾಲದ **(Online Application)** ಮೂಲಕ ಅರ್ಜಿಗಳನ್ನು ದಿನಾಂಕ :19/02/2022ರ (ಸಂಜೆ 5.30ಗಂಟೆ) ಒಳಗಾಗಿ ನಿಗದಿಪಡಿಸಿದ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
5. ವಯೋಮಿತಿ :ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು, ಗರಿಷ್ಠ ವಯೋಮಿತಿ :–
   (ಎ) ಸಾಮಾನ್ಯ ವರ್ಗ : 36 ವರ್ಷಗಳು
   (ಬಿ) 2ಎ, 2ಬಿ, 3ಎ, 3ಬಿ : 38 ವರ್ಷಗಳು
   (ಸಿ) ಪ.ಜಾ/ಪ.ಪಂ.ಪ್ರ–1 : 40 ವರ್ಷಗಳು
6. ಅರ್ಜಿ ನಮೂನೆ ಹಾಗೂ ಅಧಿಸೂಚನೆ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ. ಹಾಗೂ ಅರ್ಜಿಗಳನ್ನು ಸಲ್ಲಿಸಲು ಹೆಚ್ಚಿನ ಮಾಹಿತಿಗಾಗಿ **"ಉಪ ನಿರ್ದೇಶಕರ ಕಚೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ, ಬೆಳಗಾವಿ"**(ದೂರವಾಣಿ ಸಂಖ್ಯೆ: (0831)2424231) ಸಂಪರ್ಕಿಸಿ.

For More Job News Visit : www.kscvaani.com

ಈ ಮಾಹಿತಿಗಳೊಂದಿಗೆ ಜಿಲ್ಲಾ ಪಂಚಾಯತ ಅಂತರ್ಜಾಲ ತಾಣದಲ್ಲಿ **(Online Application)** ಅರ್ಜಿಯನ್ನು ಸಂಬಂಧಪಟ್ಟ ದೃಢೀಕರಣ ಪತ್ರಗಳೊಂದಿಗೆ **"https://zpbelagavi.kar.nic.in"** ಇಲ್ಲಿಗೆ ಸಲ್ಲಿಸುವುದು.

ಕ್ರ.ಸಂ.	ಗ್ರಾಮ ಪಂಚಾಯತಿ ಹೆಸರು	ತಾಲೂಕು	ನಿಗದಿಯಾಗಿರುವ ಮೀಸಲಾತಿ
1	ಅಂಕಲಿ	ಚಿಕ್ಕೋಡಿ	(ಬಿಂದು 33) ಪರಿಶಿಷ್ಟ ಜಾತಿ ಅಭ್ಯರ್ಥಿ, ಗ್ರಾಮೀಣ ಅಭ್ಯರ್ಥಿ
2	ಹಲಗಾ	ಬೆಳಗಾವಿ	(ಬಿಂದು 34) ಸಾಮಾನ್ಯ ಅಭ್ಯರ್ಥಿ, ಯೋಜನಾ ಅಭ್ಯರ್ಥಿ
3	ಹಲ್ಯಾಳ	ಅಥಣಿ	(ಬಿಂದು 35) 2 'ಬಿ', ಮಹಿಳಾ ಅಭ್ಯರ್ಥಿ
4	ಹೆಬ್ಬಾಳ	ಹುಕ್ಕೇರಿ	(ಬಿಂದು 36) ಸಾಮಾನ್ಯ ಅಭ್ಯರ್ಥಿ, ಮಹಿಳಾ ಅಭ್ಯರ್ಥಿ
5	ಹೊಸೂರ	ಹುಕ್ಕೇರಿ	(ಬಿಂದು 37) 2 'ಎ', ಗ್ರಾಮೀಣ ಅಭ್ಯರ್ಥಿ
6	ಮಂಗಸೂಳಿ	ಅಥಣಿ	(ಬಿಂದು 38) ಸಾಮಾನ್ಯ ಅಭ್ಯರ್ಥಿ
7	ನಾಗನೂರ.ಪಿ.ಕೆ.	ಅಥಣಿ	(ಬಿಂದು 39) ಪರಿಶಿಷ್ಟ ಪಂಗಡ ಅಭ್ಯರ್ಥಿ, ಮಹಿಳಾ ಅಭ್ಯರ್ಥಿ
8	ಸಪ್ತಸಾಗರ	ಅಥಣಿ	(ಬಿಂದು 40) ಸಾಮಾನ್ಯ ಅಭ್ಯರ್ಥಿ, ಮಾಜಿ ಸೈನಿಕ ಅಭ್ಯರ್ಥಿ
9	ಸುಳೇಭಾವಿ	ಬೆಳಗಾವಿ	(ಬಿಂದು 41) ಪರಿಶಿಷ್ಟ ಜಾತಿ ಅಭ್ಯರ್ಥಿ

ಜಿಲ್ಲಾ ಕೇಂದ್ರ ಗ್ರಂಥಾಲಯ, ಬೆಳಗಾವಿಯ ಗ್ರಾಮ ಪಂಚಾಯತ ಗ್ರಂಥಾಲಯಗಳಲ್ಲಿಯ ಈ ಕೆಳಗಿನ ಗ್ರಾಮಗಳಲ್ಲಿಯ ಮೇಲ್ವಿಚಾರಕರ ಸ್ಥಾನಗಳು ಖಾಲಿ ಇದ್ದು, ಅವುಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ ಸದರಿ ರಿಕ್ತ ಸ್ಥಾನಗಳಿಗೆ ನಿಗದಿತ ಮೀಸಲಾತಿಯ ಅರ್ಜಿಗಳು ಬಾರದೇ ಇದ್ದ ಕಾರಣ ಸದರಿ ಇರುವ ಬಿಂದುವನ್ನೇ ಮುಂದುವರೆಸಿ ಮರು ಪ್ರಕಟಣೆ ಹೊರಡಿಸಲು ಉದ್ದೇಶಿಸಿದ ಗ್ರಾಮ ಪಂಚಾಯತಿಗಳ ಮೀಸಲಾತಿ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಗ್ರಾಮ ಪಂಚಾಯತಿ ಹೆಸರು	ತಾಲೂಕು	ನಿಗದಿಯಾಗಿರುವ ಮೀಸಲಾತಿ
1	ಚುಳಕಿ (2ನೇ ಬಾರಿ ಕರೆ)	ಸವದತ್ತಿ	(ಬಿಂದು 23) ಪರಿಶಿಷ್ಟ ಜಾತಿ ಅಭ್ಯರ್ಥಿ, ಅಂಗವಿಕಲ ಅಭ್ಯರ್ಥಿ
2	ಹೊಸವಂಟಮೂರಿ (3ನೇ ಬಾರಿ ಕರೆ)	ಬೆಳಗಾವಿ	(ಬಿಂದು 25) 2 'ಎ', ಅಂಗವಿಕಲ ಅಭ್ಯರ್ಥಿ
3	ಕರಂಬಳ (2ನೇ ಬಾರಿ ಕರೆ)	ಖಾನಾಪೂರ	(ಬಿಂದು 27) ಪರಿಶಿಷ್ಟ ಜಾತಿ ಅಭ್ಯರ್ಥಿ, ಮಹಿಳಾ ಅಭ್ಯರ್ಥಿ

ಸೂಚನೆ: ಸದರಿ ಮೇಲ್ವಿಚಾರಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ.12,000/-ರಂತೆ ಗೌರವ ಸಂಭಾವನೆ ಇರುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಬೆಳಗಾವಿ.